ತಾರಕಾ ಜಲಾಶಯದ ಯೋಜನೆ

೧೦೦೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ತಾರಕಾ ಜಲಾಶಯ ಯೋಜನೆಯ ಮೂಲ ಅಂದಾಜು ಎಷ್ಟು?

ಆ) ಸದರಿ ಯೋಜನೆಯಿಂದ ನೀರು ಪಡೆಯಲು ಉದ್ದೇಶಿಸಿದ ನೀರಾವರಿ ಪ್ರದೇಶ ಎಷ್ಟು?

ಇ) ಸದರಿ ಉದ್ದೇಶಿತ ಪ್ರದೇಶಕ್ಕೆ ಪೂರ್ಣ ಪ್ರಮಾಣದ ನೀರನ್ನು ಒದಗಿಸಲಾಗಿದೆಯೆ ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಹಾಗೂ ಯಾವಾಗ ಒದಗಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೭೦ ಲಕ್ಷ ರೂಪಾಯಿಗಳು.

ಆ) ೪,೮೫೬ ಹೆಕ್ಟೇರ್ (೧೨,೦೦೦ ಎಕರೆಗಳು).

ಇ) ಮೂಲ ಅಂದಾಜಿನಲ್ಲಿ ಉದ್ದೇಶಿಸಲಾಗಿದ್ದ ಪೂರ್ಣ ಪ್ರಮಾಣದ ಆಚ್ಚುಕಟ್ಟಿಗೆ ನೀರನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮೊದಲು ಸುಮಾರು ೧೨ ಸಾವಿರ ಎಕರೆ ಗಳಿಗೆ ಮಾತ್ರ ನೀರು ಕೊಡಬೇಕೆನ್ನುವ ಒಂದು ಅಂದಾಜು ಇಟ್ಟುಕೊಂಡಿದ್ದೆವು. ಆದರೆ ಈಗ ಆ ಅಂದಾಜನ್ನು ರಿವೈಜ್ ಮಾಡಿ ಸುಮಾರು ೨೨ ಸಾವಿರ ಎಕರೆಗಳಿಗೆ ನೀರನ್ನು ಒದಗಿಸಿಕೊಡುವ ಒಂದು ಯೋಜನೆಯನ್ನು ಮಾಡಿದ್ದೇವೆ. ಹಿಂದಿನ ಒಂದು ಅಂದಾಜಿನ ಪ್ರಕಾರ ೩.೧೨ ಟಿ.ಎಂ.ಸಿ. ನೀರು ಬೇಕಾಗಿತ್ತು. ಆದರೆ ಈಗ ಹೆಚ್ಚು ನೀರು ಬೇಕಾಗುತ್ತದೆ. ಅಷ್ಟು ಪ್ರಮಾಣದ ನೀರು ಅಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ, ಮತ್ತು ೬ ಲಕ್ಷ ರೂಪಾಯಿಗಳ ಅಂದಾಜಿ ನಲ್ಲಿ ಒಂದು ಅಣೆಕಟ್ಟು ಕಟ್ಟುವ ಯೋಜನೆ ಕೂಡ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಎಂ. ಶಿವಣ್ಣ.—ಸನ್ಮಾನ್ಯ ಅಧ್ಯಕ್ಷರೇ ೧೯೬೦ನೇ ಇಸವಿಯಲ್ಲಿ ಒಂದು ಅಣೆಕಟ್ಟನ್ನು ಅಲ್ಲಿ ಸ್ಥಾಪನೆ ಮಾಡಿದರು. ಆದರೆ ಆ ಅಣೆಕಟ್ಟಿನಿಂದ ನಮ್ಮ ತಾಲ್ಲೂಕಿಗೆ ಯಾವುದೇ ರೀತಿಯ ಅನುಕೂಲ ವಾಗುತ್ತಿಲ್ಲ. ಅಣೆಕಟ್ಟಿನಿಂದ ಪಕ್ಕದ ತಾಲ್ಲೂಕುಗಳಿಗೆ ಮಾತ್ರ ಹೆಚ್ಚಿನ ಅನುಕೂಲವಾಗುತ್ತಿದೆ. ನಮ್ಮಲ್ಲಿ ಮಂಚಿಕ್ಯವಾಗಿ ಎರಡು ಅಣೆಕಟ್ಟುಗಳು ಇವೆ. ಒಂದು ಕಬಿನಿ ಎರಡನೆಯದು ನಂಗು. ಆದರೂ ಕೂಡ ನಮ್ಮ ತಾಲ್ಲೂಕಿಗೆ ಯಾವ ಪ್ರಯೋಜನವಿಲ್ಲ. ನನಗೆ ತಿಳಿದ ಮಟ್ಟಿಗೆ ಕಬಿನಿ ಜಲಾಶಯದಲ್ಲಿ ಹೆಚ್ಚು ನೀರು ಇದೆ. ಅಲ್ಲಿಗೆ ಸಮೀಪದ ತಾರಕದಲ್ಲಿ ಲಿಫ್ಟ್ ಇರಿಗೇಷನ್ ಮಾಡಲು ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತಾರೆಯೇ? ಮತ್ತು ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು ಸುಮಾರು ೨೨ ಸಾವಿರ ಎಕರೆಗಳಿಗೆ ನೀರಾವರಿಯನ್ನು ಕೊಡಲು ಅಂದಾಜು ಮಾಡಿದ್ದೇವೆಂದು. ಆದರೆ ಕಬಿನಿ ಜಲಾಶಯದಲ್ಲಿ ಹೆಚ್ಚು ನೀರು ಇದೆ. ಅದನ್ನು ಉಪಯೋಗಿಸಿಕೊಂಡು ನೀರಾವರಿ ಸೌಕರ್ಯವನ್ನು ಒದಗಿಸಿಕೊಡುತ್ತಾರೆಯೇ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸ್ವಲ್ಪ ಮಟ್ಟಿಗೆ ವಾಸ್ತವಾಂಶವಿದೆ. ಡ್ಯಾಮ್ ಸೈಟ್‌ನಲ್ಲಿ ಎಷ್ಟು ನೀರು ಸಿಗುತ್ತದೆ ಎಂಬುದನ್ನು ನಾವು ಮೊದಲು ಪರಿಶೀಲನೆ ಮಾಡಬೇಕಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ಸುಮಾರು ೩.೧೨ ಟಿ.ಎಂ.ಸಿ ನೀರು ನಮಗೆ ಬೇಕಾಗುತ್ತದೆ. ಮತ್ತು ಕಬಿನಿಯಲ್ಲಿ ಇರತಕ್ಕಂಥ ನೀರನ್ನು ಉಪಯೋಗಿಸಿ ಕೊಂಡು ಲಿಫ್ಟ್ ಇರಿಗೇಷನ್ ಮಾಡಿಸುವಂತೆ ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಕಡೂರು ತಾಲ್ಲೂಕಿನ ಪಂಚನಹಳ್ಳಿಯಲ್ಲಿ ಪೆಟ್ರಿಕ್ ನಂತರದ ವಿದ್ಯಾರ್ಥಿನಿಲಯವನ್ನು ತೆರೆಯುವುದು

೯೦೩. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?